# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 581 |
| ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 11.07.2023 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 4 ವರ್ಷಗಳಲ್ಲಿ ಅಕ್ರಮ ಮರಳುಗಾರಿಕೆಗೆ ಸಂಬಂಧಿಸಿದಂತೆ, ದಾಖಲಾದ ಒಟ್ಟು ಪ್ರಕರಣಗಳು ಎಷ್ಟು; ಅವು ಯಾವುವು (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಳೆದ 04 ವರ್ಷಗಳಲ್ಲಿ ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ಸಂಬಂಧ ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ಕ್ರಮ ಕೈಗೊಂಡು 13576 ಪ್ರಕರಣಗಳನ್ನು ಪತ್ತೆ ಹಚ್ಚಿ, 5366 ಪ್ರಕರಣಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಿದ್ದು, 8210 ಪ್ರಕರಣಗಳಲ್ಲಿ ₹2882.54 ಲಕ್ಷಗಳ ಮೊತ್ತದ ದಂಡವನ್ನು ವಿಧಿಸಿ ವಸೂಲಿ ಮಾಡಲಾಗಿರುತ್ತದೆ.<br>ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಹಾಗೂ ಮರಳುಗಾರಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | **ಅನಧಿಕೃತ ಗಣಿಗಾರಿಕೆ / ಮರಳು ಗಣಿಗಾರಿಕೆ ತಡೆಗಟ್ಟಲು ಸರ್ಕಾರದಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:**<br>• ಮುಖ್ಯ ಖನಿಜ ಮತ್ತು ಉಪಖನಿಜಗಳಿಗೆ ಸಂಬಂಧಿಸಿದಂತೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮ ವಹಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 21 ಎಂಎಂಎನ್ (2) 2014, ದಿನಾಂಕ 21.01.2014 ರಂತೆ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 21 ಮತ್ತು 22 ರಂತೆ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43 ಮತ್ತು 46 ರಂತೆ ಕಂದಾಯ, ಅರಣ್ಯ, ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಅದರಂತೆ ಸಂಬಂಧಪಟ್ಟ ಅಧಿಕಾರಿಗಳು ಅನಧಿಕೃತ ಗಣಿಗಾರಿಕೆ ತಡೆಗಟ್ಟಲು ಕ್ರಮ ವಹಿಸುತ್ತಿರುತ್ತಾರೆ.<br>• ಗುತ್ತಿಗೆ ಮಂಜೂರಾದ ಕಲ್ಲುಗಣಿ ಗುತ್ತಿಗೆ ಪ್ರದೇಶಗಳನ್ನು ಹೊರತುಪಡಿಸಿ ಹೊರಭಾಗದಲ್ಲಿ ಒತ್ತುವರಿ ಮಾಡಿ ಗಣಿಗಾರಿಕೆಯನ್ನು ನಡೆಸುವುದನ್ನು ತಡೆಗಟ್ಟಲು ಗುತ್ತಿಗೆ ಪ್ರದೇಶಕ್ಕೆ Geo-fencing ಅಳವಡಿಸಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

- ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು 'ಖನಿಜ ರಕ್ಷಣಾ ಪಡೆ' ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- Karnataka State Remote Sensing Application Centre (KSRSAC) ರವರಿಂದ ಉಪಖನಿಜ ಗಣಿ ಗುತ್ತಿಗೆ ಪ್ರದೇಶಗಳನ್ನು Drone/DGPS ಸರ್ವೆ ಕೈಗೊಂಡು ಪ್ರಸ್ತುತ ಗುತ್ತಿಗೆ ಪ್ರದೇಶದ Reduced Level ಗಳನ್ನು ಘನೀಕರಿಸಲು ಕ್ರಮ ವಹಿಸಲಾಗಿದೆ.
- Integrated Lease Management System (ILMS) version-II ಜಾರಿಗೊಳಿಸಲಾಗುತ್ತಿದ್ದು, ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು ಖನಿಜ ಸಾಗಾಣಿಕಾ ವಾಹನಗಳಿಗೆ GPS ಅಳವಡಿಸಿ ಕೇಂದ್ರೀಕೃತವಾಗಿ ನಿಗಾವಹಿಸಲು ತಂತ್ರಾಂಶ ರೂಪಿಸಲಾಗುತ್ತಿದೆ.
- ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ.
- ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 4(1), 4(1-A), 21 ಮತ್ತು 22ರಡಿ ಹಾಗೂ ಕರ್ನಾಟಕ ಉಪ ಖನಿಜ (ತಿದ್ದುಪಡಿ) ರಿಯಾಯಿತಿ ನಿಯಮಗಳು, 1994ರ ನಿಯಮ 31-R (12) ರಡಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.
- ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಲ್ಲಿ ಸಂಗ್ರಹವಾಗುವ ಒಟ್ಟು ಮೊತ್ತದಲ್ಲಿ ಆಡಳಿತಾತ್ಮಕ ವೆಚ್ಚಕ್ಕಾಗಿ ಮೀಸಲಿರಿಸಿರುವ ಶೇ. 4 ರಷ್ಟು ಮೊತ್ತವನ್ನು ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು ಮತ್ತು ಸಾಗಾಣಿಕೆಯನ್ನು ನಿಯಂತ್ರಿಸುವ ಸಂಬಂಧ ತನಿಖಾ ಠಾಣೆಗಳನ್ನು ಸ್ಥಾಪಿಸಲು, ಗೃಹ ರಕ್ಷಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಹಾಗೂ ಇನ್ನಿತರ ಖರ್ಚು ವೆಚ್ಚಗಳಿಗೆ ಬಳಸಿಕೊಳ್ಳಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.
- ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾ ಹಾಗೂ ಮರಳು ಸಮಿತಿಯಿಂದ ಚಾಲಿತ ದಳ ತಂಡವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ.

| | | |
|---|---|---|
| | | ಮೇಲ್ಕಂಡಂತೆ, ರಾಜ್ಯದಲ್ಲಿ ಅನಧಿಕೃತ ಗಣಿಗಾರಿಕೆ/ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ. |
| ಇ) | ಅಧಿಕೃತವಾಗಿ ಮರಳುಗಾರಿಕೆಯನ್ನು ನಡೆಸಲು ಅನುಮತಿ ಪಡೆಯಲು ಸರ್ಕಾರ ರೂಪಿಸಿರುವ ಮಾನದಂಡಗಳೇನು; | • ಪ್ರಸ್ತುತ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರಂತೆ ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ ಅಥವಾ ಸರ್ಕಾರಿ ಸ್ವಾಮ್ಯದ ನಿಗಮ ಅಥವಾ ಮಂಡಳಿಗಳಿಗೆ ಮರಳು ಗಣಿಗಾರಿಕೆ ನಡೆಸಿ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• I, II ಮತ್ತು III ನೇ ಶ್ರೇಣಿಯ ಹಳ್ಳ / ತೊರೆಗಳ ಪಾತ್ರಗಳಲ್ಲಿ ತಾಲ್ಲೂಕು ಮರಳು ಸಮಿತಿಯಿಂದ ಮರಳು ತೆಗೆಯಲು ಗುರುತಿಸಿರುವ ಪ್ರದೇಶಗಳಲ್ಲಿ ತಾಲ್ಲೂಕು ಮರಳು ಸಮಿತಿಯ ಸೂಕ್ತ ಶಿಫಾರಸ್ಸಿನೊಂದಿಗೆ ಜಿಲ್ಲಾ ಮರಳು ಸಮಿತಿಯು ಅಗತ್ಯವಿದ್ದಲ್ಲಿ ಸೂಕ್ತ ಮಾರ್ಪಾಡುಗಳೊಂದಿಗೆ ಗ್ರಾಮ ಪಂಚಾಯಿತಿಯಿಂದ ಮರಳು ತೆಗೆದು ಸ್ಥಳೀಯ ಕಾಮಗಾರಿಗೆ ನೀಡಲು ಅಧಿಸೂಚನೆ ಹೊರಡಿಸುತ್ತದೆ. ತರುವಾಯ ತಾಲ್ಲೂಕು ಮರಳು ಸಮಿತಿಯ ಅಧ್ಯಕ್ಷರು, ಜಿಲ್ಲಾ ಮರಳು ಸಮಿತಿಯಿಂದ ಅಧಿಸೂಚನೆ ಹೊರಡಿಸಿರುವ ನಿಕ್ಷೇಪ ಪ್ರದೇಶಗಳಲ್ಲಿ ಮರಳು ತೆಗೆಯಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಕಾರ್ಯಾದೇಶ ನೀಡುತ್ತಾರೆ.<br>• ಗ್ರಾಹಕರು ಸರ್ಕಾರದಿಂದ ಪ್ರತಿ ಮೆಟ್ರಿಕ್ ಟನ್ ಮರಳಿಗೆ ನಿಗದಿಪಡಿಸಿರುವ ₹ 300/- ಗಳ ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಪಾವತಿಸಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ವಿತರಿಸುವ ವಿಶೇಷ ರಕ್ಷಣಾತ್ಮಕ ಪರವಾನಿಗೆಯೊಂದಿಗೆ ಎತ್ತಿನಗಾಡಿ, ಟ್ರ್ಯಾಕ್ಟರ್ / ಇತರ 03 ಟನ್ ಸಾಮರ್ಥ್ಯಕ್ಕಿಂತ ಕಡಿಮೆ ಇರುವ ವಾಹನಗಳಲ್ಲಿ ಮರಳನ್ನು ಸಾಗಾಣಿಕೆ ಮಾಡಿಕೊಳ್ಳಬಹುದಾಗಿರುತ್ತದೆ.<br>• ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಮೆ\|\| ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಹಾಗೂ ಮೆ\|\| ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ರವರಿಗೆ IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ ಹಾಗೂ ಅಣೆಕಟ್ಟು / ಜಲಾಶಯ / ಬ್ಯಾರೇಜ್ ಪ್ರದೇಶಗಳಲ್ಲಿ ಹೂಳಿ ನೊಂದಿಗೆ ದೊರೆಯುವ ಮರಳನ್ನು ತೆಗೆದು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಜಿಲ್ಲಾ / ತಾಲ್ಲೂಕು ಮರಳು ಸಮಿತಿಯಿಂದ IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ ಹಾಗೂ ಅಣೆಕಟ್ಟು / ಜಲಾಶಯ / ಬ್ಯಾರೇಜ್ ಪ್ರದೇಶಗಳಲ್ಲಿ ಹೂಳಿನೊಂದಿಗೆ ದೊರೆಯುವ ಮರಳು ಪ್ರದೇಶಗಳನ್ನು ಗುರುತಿಸಲಾಗುತ್ತದೆ. |

. . . 4

- ನಂತರ ಸದರಿ ಪ್ರದೇಶಗಳನ್ನು ಜಿಲ್ಲಾ ಮರಳು ಸಮಿತಿಯ ಅನುಮೋದನೆಯೊಂದಿಗೆ ಸಂಬಂಧಪಟ್ಟ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಮರಳು ಗಣಿಗಾರಿಕೆ/ ಹೂಳಿನೊಂದಿಗೆ ದೊರೆಯುವ ಮರಳು ತೆಗೆಯಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. De-siltation ಗೆ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳಲ್ಲಿ ಸಂಬಂಧಪಟ್ಟ ಸಂಸ್ಥೆಗಳಿಗೆ De-siltation ನಡೆಸಲು ಕಾರ್ಯಾದೇಶ ನೀಡಲಾಗುತ್ತದೆ.
- ಮುಂದುವರೆದು, IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ ಅಧಿಸೂಚನೆ ಹೊರಡಿಸಿದ ಮರಳು ಬ್ಲಾಕ್ ಗಳಿಗೆ ಸಂಬಂಧಪಟ್ಟ ಸಂಸ್ಥೆಗಳಿಗೆ ಅನುಮೋದಿತ ಕ್ವಾರಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರ ಸಲ್ಲಿಸಲು ಜಿಲ್ಲಾ ಮರಳು ಸಮಿತಿಯಿಂದ ಆಶಯ ಪತ್ರ ನೀಡಲಾಗುತ್ತದೆ. ಸಂಬಂಧಪಟ್ಟ ಸರ್ಕಾರಿ ಸಂಸ್ಥೆಗಳು ಅನುಮೋದಿತ ಕ್ವಾರಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರ ಸಲ್ಲಿಸಿದ ನಂತರ ಮರಳು ಗಣಿಗಾರಿಕೆಗೆ ಜಿಲ್ಲಾ ಮರಳು ಸಮಿತಿಯಿಂದ 05 ವರ್ಷಗಳ ಅವಧಿಗೆ ಅಥವಾ ಮರಳಿನ ಪ್ರಮಾಣವು ಮುಕ್ತಾಯವಾಗುವ ಅವಧಿಯವರೆಗೆ ಅಥವಾ ಇವೆರಡರಲ್ಲಿ ಯಾವುದು ಮೊದಲೋ ಸದರಿ ಅವಧಿಗೆ ಕಾರ್ಯದೇಶ ನೀಡಲಾಗುತ್ತದೆ.
- ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರ ನಿಯಮ 31-Z ರಂತೆ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ನಿಯಮದಂತೆ ಪಟ್ಟಾ ಜಮೀನಿನ ಮಾಲೀಕರು ಅಥವಾ ಪಟ್ಟಾ ಜಮೀನಿನ ಮಾಲೀಕರಿಂದ ಒಪ್ಪಿಗೆ ಪ್ರಮಾಣ ಪತ್ರ ಅಥವಾ ಜಿಪಿಎ ಪತ್ರ ಸಲ್ಲಿಸಿದವರಿಗೆ ಮರಳು ಗಣಿಗಾರಿಕೆಗೆ 05 ವರ್ಷಗಳ ಅವಧಿಗೆ ಲೈಸನ್ಸ್ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.
- ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಲೈಸನ್ಸ್ ನೀಡುವ ಸಂಬಂಧ ದಿನಾಂಕ 15.02.2022 ರಂದು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಪ್ರತಿಯನ್ನು **ಅನುಬಂಧ-02** ರಲ್ಲಿ ನೀಡಲಾಗಿದೆ.

- ಪ್ರಸ್ತುತ, ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ಜಾರಿಗೆ ಬಂದಿದ್ದು, ಸದರಿ ತಿದ್ದುಪಡಿ ನಿಯಮಗಳಲ್ಲಿ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮರಳು ಗಣಿಗಾರಿಕೆಯೊಂದಿಗೆ IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿರುವ ಮರಳು ಬ್ಲಾಕ್ ಗಳನ್ನು ಸಾರ್ವಜನಿಕ ಟೆಂಡರ್ ಕಂ-ಹರಾಜು ಮೂಲಕ ವಿಲೇಪಡಿಸಲು ಸಹ ಅವಕಾಶ ಕಲ್ಪಿಸಲಾಗಿರುತ್ತದೆ.

| | | |
|---|---|---|
| ಈ) | ಜನ ಸಾಮಾನ್ಯರು ಮನೆಗಳನ್ನು ನಿರ್ಮಿಸಲು ಮರಳನ್ನು ಖರೀದಿಸಲು ಸರ್ಕಾರ ನಿಗದಿಪಡಿಸಿರುವ ದರ ಎಷ್ಟು? | • ಸರ್ಕಾರಿ ಹಾಗೂ ಸಾರ್ವಜನಿಕ ನಿರ್ಮಾಣ ಕಾಮಗಾರಿಗಳಿಗೆ ನಿಯಮಿತವಾಗಿ ಸುಲಭವಾಗಿ ಕೈಗೆಟಕುವ ದರದಲ್ಲಿ ಮರಳು ದೊರಕುವಂತೆ ಮಾಡಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ಕ್ಕೆ ತಿದ್ದುಪಡಿ ತಂದು ದಿನಾಂಕ 05.05.2020 ರಂದು ಹೊಸ ಮರಳು ನೀತಿ, 2020ನ್ನು ಹಾಗೂ ಸದರಿ ಮರಳು ನೀತಿಯಂತೆ ತಿದ್ದುಪಡಿ ನಿಯಮಗಳು, 2021 ನ್ನು ಜಾರಿಗೊಳಿಸಲಾಗಿರುತ್ತದೆ.<br>• I, II ಮತ್ತು III ನೇ ಶ್ರೇಣಿಯ ಹಳ್ಳ/ತೊರೆ ಮತ್ತು ಕೆರೆಗಳಲ್ಲಿ ಮರಳು ತೆಗೆದು ಗ್ರಾಮ ಪಂಚಾಯತಿಗಳ ಮೂಲಕ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ₹300/- ಗಳನ್ನು ನಿಗದಿಪಡಿಸಲಾಗಿರುತ್ತದೆ.<br>• IV, V ಮತ್ತು VI ನೇ ಶ್ರೇಣಿಯ ಹೊಳೆ / ನದಿಗಳಲ್ಲಿ ಲಭ್ಯವಿರುವ ಮರಳನ್ನು ಮತ್ತು ಅಣೆಕಟ್ಟು / ಜಲಾಶಯ / ಬ್ಯಾರೇಜ್‌ಗಳು ಮತ್ತು ಸದರಿ ಹಿನ್ನೀರಿನ ಪ್ರದೇಶಗಳಲ್ಲಿ ಹೂಳು ತೆಗೆಯುವ ಮುಖಾಂತರ ದೊರೆತ ಮರಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಮೆ॥ ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಶನ್ ಲಿ., ಮತ್ತು ಮೆ॥ ಹಟ್ಟಿ ಚಿನ್ನದ ಗಣಿ ನಿಯಮಿತ ಇವರಿಗೆ ವಹಿಸಲಾಗಿರುತ್ತದೆ. ಸದರಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ₹700/- ಗಳನ್ನು ನಿಗದಿಪಡಿಸಲಾಗಿರುತ್ತದೆ. |

ಸಂಖ್ಯೆ ಸಿಐ -ಎಂಎಂಎನ್/155/2023

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

V

ಅನುಬಂಧ-.

ರಾಜ್ಯದಲ್ಲಿ ಕಳೆದ 04 ವರ್ಷಗಳಲ್ಲಿ ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ಸಂಬಂಧ ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ಕೈಗೊಂಡ ಕ್ರಮದ ವಿವರಗಳು

| 2019–20 | | | | |
|---|---|---|---|---|
| ಕ್ರ. ಸಂ. | ಪ್ರಕರಣಗಳ ವಿವರ | ಪ್ರಕರಣಗಳ ಸಂಖ್ಯೆ | ದಂಡ (ರೂ. ಲಕ್ಷಗಳಲ್ಲಿ) | ದಾಖಲಿಸಿದ ಎಫ್.ಐ.ಆರ್. |
| 1 | ಅನಧಿಕೃತ ಮರಳು ಗಣಿಗಾರಿಕೆ | 240 | 128.81 | 106 |
| 2 | ಅನಧಿಕೃತ ಮರಳು ಸಾಗಾಣಿಕೆ | 2676 | 271.01 | 1866 |
| 3 | ಅನಧಿಕೃತ ಮರಳು ದಾಸ್ತಾನು | 271 | 52.75 | 113 |
| ಒಟ್ಟು | | **3187** | **452.57** | **2085** |
| **2020–21** | | | | |
| ಕ್ರ. ಸಂ. | ಪ್ರಕರಣಗಳ ವಿವರ | ಪ್ರಕರಣಗಳ ಸಂಖ್ಯೆ | ದಂಡ (ರೂ. ಲಕ್ಷಗಳಲ್ಲಿ) | ದಾಖಲಿಸಿದ ಎಫ್.ಐ.ಆರ್. |
| 1 | ಅನಧಿಕೃತ ಮರಳು ಗಣಿಗಾರಿಕೆ | 293 | 82.55 | 72 |
| 2 | ಅನಧಿಕೃತ ಮರಳು ಸಾಗಾಣಿಕೆ | 2866 | 506.41 | 929 |
| 3 | ಅನಧಿಕೃತ ಮರಳು ದಾಸ್ತಾನು | 288 | 136.35 | 127 |
| ಒಟ್ಟು | | **3447** | **725.31** | **1128** |
| **2021–22** | | | | |
| ಕ್ರ. ಸಂ. | ಪ್ರಕರಣಗಳ ವಿವರ | ಪ್ರಕರಣಗಳ ಸಂಖ್ಯೆ | ದಂಡ (ರೂ. ಲಕ್ಷಗಳಲ್ಲಿ) | ದಾಖಲಿಸಿದ ಎಫ್.ಐ.ಆರ್. |
| 1 | ಅನಧಿಕೃತ ಮರಳು ಗಣಿಗಾರಿಕೆ | 326 | 113.93 | 84 |
| 2 | ಅನಧಿಕೃತ ಮರಳು ಸಾಗಾಣಿಕೆ | 2949 | 608.74 | 971 |
| 3 | ಅನಧಿಕೃತ ಮರಳು ದಾಸ್ತಾನು | 261 | 183.58 | 134 |
| ಒಟ್ಟು | | **3536** | **906.25** | **1189** |
| **2022–23** | | | | |
| ಕ್ರ. ಸಂ. | ಪ್ರಕರಣಗಳ ವಿವರ | ಪ್ರಕರಣಗಳ ಸಂಖ್ಯೆ | ದಂಡ (ರೂ. ಲಕ್ಷಗಳಲ್ಲಿ) | ದಾಖಲಿಸಿದ ಎಫ್.ಐ.ಆರ್. |
| 1 | ಅನಧಿಕೃತ ಮರಳು ಗಣಿಗಾರಿಕೆ | 239 | 92.43 | 63 |
| 2 | ಅನಧಿಕೃತ ಮರಳು ಸಾಗಾಣಿಕೆ | 2864 | 623.86 | 741 |
| 3 | ಅನಧಿಕೃತ ಮರಳು ದಾಸ್ತಾನು | 303 | 82.12 | 160 |
| ಒಟ್ಟು | | **3406** | **798.41** | **964** |
| ***ಒಟ್ಟು*** | | ***13576*** | ***2882.54*** | ***5366*** |

Sd/-

Deputy Director (Min. Admn)
Dept. of Mines & Geology
Bangalore-560001

## ಜಿಲ್ಲಾ ಮರಳು ಸಮಿತಿಯ ವಿವಿಧ ಇಲಾಖೆಗಳಿಂದ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ತಡೆಗಟ್ಟಿ ದಂಡ ವಿಧಿಸಿರುವ ಮತ್ತು ಮೊಕದ್ದಮೆ ದಾಖಲಿಸಿರುವ ವಿವರಗಳು

2019–20

| ಕ್ರ ಸಂ. | ಜಿಲ್ಲೆ | 1. ಅನಧಿಕೃತ ಮರಳು ಗಣಿಗಾರಿಕೆ | | | | 2. ಅನಧಿಕೃತ ಸಾಧಾರಣ ಮರಳು ಸಾಗಾಣಿಕೆ | | | | 3. ಅನಧಿಕೃತ ಸಾಧಾರಣ ಮರಳು ದಾಸ್ತಾನು | | | |
|---|---|---|---|---|---|---|---|---|---|---|---|---|---|
| | | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | | ದಂಡ ವಿಧಿಸಿದ/ ಪತ್ತೆಹಚ್ಚಿದ ವಾಹನಗಳ ಸಂಖ್ಯೆ | ವಿಧಿಸಿರುವ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | |
| | | | | FIR No. | CC No. | | | FIR No. | CC No. | | | FIR No. | CC No. |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 1 | ಬೆಂಗಳೂರು ಗ್ರಾಮಾಂತರ | 0 | 0.00 | 0 | 0 | 1 | 0.20 | 0 | 0 | 0 | 0.00 | 0 | 0 |
| 2 | ಬೆಂಗಳೂರು ನಗರ | 0 | 0.00 | 0 | 0 | 0 | 0.00 | 0 | 0 | 0 | 0.00 | 0 | 0 |
| 3 | ತುಮಕೂರು | 1 | 0.57 | 0 | 0 | 28 | 0.00 | 0 | 28 | 2 | 0.00 | 0 | 2 |
| 4 | ಕೋಲಾರ | 1 | 0.00 | 0 | 1 | 1 | 0.00 | 0 | 1 | 0 | 0.00 | 0 | 0 |
| 5 | ಚಿಕ್ಕಬಳ್ಳಾಪುರ | 0 | 0.00 | 0 | 0 | 426 | 84.59 | 0 | 1 | 0 | 0.00 | 0 | 0 |
| 6 | ರಾಮನಗರ | 2 | 0.00 | 0 | 2 | 10 | 0.07 | 0 | 8 | 1 | 0.00 | 0 | 1 |
| 7 | ದಾವಣಗೆರೆ | 0 | 0.00 | 0 | 0 | 57 | 8.85 | 0 | 0 | 0 | 0.00 | 0 | 0 |
| 8 | ಚಿತ್ರದುರ್ಗ | 2 | 0.00 | 2 | 0 | 233 | 2.67 | 213 | 0 | 1 | 1.20 | 0 | 0 |
| 9 | ಶಿವಮೊಗ್ಗ | 6 | 9.82 | 1 | 0 | 46 | 4.26 | 1 | 0 | 1 | 0.00 | 1 | 0 |
| 10 | ಮೈಸೂರು | 0 | 0.00 | 0 | 0 | 154 | 49.39 | 0 | 0 | 0 | 0.00 | 0 | 0 |
| 11 | ಮಂಡ್ಯ | 0 | 0.00 | 0 | 0 | 1 | 0.00 | 1 | 0 | 0 | 0.00 | 0 | 0 |
| 12 | ಚಾಮರಾಜನಗರ | 1 | 0.00 | 1 | 0 | 3 | 0.10 | 1 | 0 | 0 | 0.00 | 0 | 0 |
| 13 | ಹಾಸನ | 0 | 0.00 | 0 | 0 | 24 | 0.75 | 17 | 4 | 4 | 0.00 | 2 | 2 |
| 14 | ದಕ್ಷಿಣ ಕನ್ನಡ | 2 | 0.00 | 0 | 2 | 125 | 0.00 | 0 | 125 | 17 | 9.66 | 0 | 0 |
| 15 | ಉಡುಪಿ | 119 | 76.50 | 38 | 0 | 98 | 5.10 | 109 | 0 | 7 | 0.00 | 5 | 0 |
| 16 | ಕೊಡಗು | 0 | 0.00 | 0 | 0 | 27 | 4.21 | 7 | 0 | 15 | 1.74 | 1 | 0 |
| 17 | ಚಿಕ್ಕಮಗಳೂರು | 53 | 1.00 | 52 | 0 | 11 | 1.00 | 123 | 0 | 0 | 0.00 | 19 | 0 |
| 18 | ಕಲಬುರಗಿ | 0 | 0.00 | 0 | 0 | 249 | 8.35 | 235 | 2 | 30 | 4.82 | 20 | 1 |
| 19 | ರಾಯಚೂರು | 7 | 20.11 | 0 | 1 | 195 | 0.00 | 75 | 90 | 38 | 0.00 | 0 | 31 |
| 20 | ಬೀದರ್ | 16 | 3.59 | 0 | 0 | 82 | 19.95 | 0 | 0 | 1 | 0.55 | 0 | 0 |
| 21 | ಬಳ್ಳಾರಿ | 6 | 0.77 | 0 | 0 | 160 | 6.82 | 165 | 2 | 5 | 0.60 | 5 | 4 |
| | ಹೊಸಪೇಟೆ | 0 | 0.00 | 0 | 0 | 173 | 0.00 | 128 | 0 | 5 | 0.87 | 2 | 0 |
| 22 | ಯಾದಗಿರಿ | 0 | 0.00 | 0 | 0 | 152 | 1.50 | 146 | 0 | 0 | 0.00 | 0 | 0 |
| 23 | ಕೊಪ್ಪಳ | 2 | 0.00 | 2 | 0 | 25 | 0.00 | 16 | 0 | 74 | 0.00 | 16 | 0 |
| 24 | ಬೆಳಗಾಂ | 3 | 1.15 | 0 | 3 | 128 | 2.27 | 121 | 0 | 3 | 0.00 | 0 | 0 |
| 25 | ವಿಜಯಪುರ | 0 | 0.00 | 0 | 0 | 0 | 0.00 | 0 | 0 | 0 | 0.00 | 0 | 0 |
| 26 | ಧಾರವಾಡ | 0 | 0.00 | 0 | 0 | 7 | 0.95 | 0 | 1 | 0 | 0.00 | 0 | 0 |
| 27 | ಗದಗ | 14 | 8.55 | 0 | 0 | 63 | 21.71 | 0 | 3 | 36 | 20.34 | 0 | 1 |
| 28 | ಹಾವೇರಿ | 2 | 6.00 | 1 | 0 | 110 | 45.00 | 23 | 1 | 27 | 1.78 | 0 | 0 |
| 29 | ಬಾಗಲಕೋಟೆ | 0 | 0.00 | 0 | 0 | 48 | 0.92 | 95 | 95 | 2 | 1.10 | 0 | 0 |
| 30 | ಉತ್ತರ ಕನ್ನಡ | 3 | 0.75 | 0 | 0 | 39 | 2.35 | 0 | 29 | 2 | 10.09 | 0 | 0 |
| | ಒಟ್ಟು | 240 | 128.81 | 97 | 9 | 2676 | 271.01 | 1476 | 390 | 271 | 52.75 | 71 | 42 |

Deputy Director (Min. Admn)
Dept. of Mines & Geology

## ಜಿಲ್ಲಾ ಮರಳು ಸಮಿತಿಯ ವಿವಿಧ ಇಲಾಖೆಗಳಿಂದ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ತಡೆಗಟ್ಟಿ ದಂಡ ವಿಧಿಸಿರುವ ಮತ್ತು ಮೊಕದ್ದಮ ದಾಖಲಿಸಿರುವ ವಿವರಗಳು

2020-21

| ಕ್ರ ಸಂ. | ಜಿಲ್ಲೆ | 1. ಅನಧಿಕೃತ ಮರಳು ಗಣಿಗಾರಿಕೆ | | | | 2. ಅನಧಿಕೃತ ಸಾಧಾರಣ ಮರಳು ಸಾಗಾಣಿಕೆ | | | | 3. ಅನಧಿಕೃತ ಸಾಧಾರಣ ಮರಳು ದಾಸ್ತಾನು | | | |
|---|---|---|---|---|---|---|---|---|---|---|---|---|---|
| | | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡದ ಮೊತ್ತ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ | | ವಶಪಡಿಸಿಕೊಂಡ / ಪತ್ತೆಹಚ್ಚಿದ ವಾಹನಗಳ ಸಂಖ್ಯೆ | ವಿಧಿಸಿರುವ ದಂಡದ ಮೊತ್ತ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡದ ಮೊತ್ತ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ | |
| | | | | FIR No. | PCR / CC No. | | | FIR No. | PCR / CC No. | | | FIR No. | PCR / CC No |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 1 | ಬೆಂಗಳೂರು ಗ್ರಾಮಾಂತರ | 0 | 0.00 | 0 | 0 | 0 | 0.00 | 0 | 0 | 0 | 0.00 | 0 | 0 |
| 2 | ಬೆಂಗಳೂರು ನಗರ | 0 | 0.00 | 0 | 0 | 0 | 0.00 | 0 | 0 | 0 | 0.00 | 0 | 0 |
| 3 | ತುಮಕೂರು | 0 | 0.00 | 0 | 0 | 8 | 5.31 | 0 | 2 | 0 | 0.00 | 0 | 0 |
| 4 | ಕೋಲಾರ | 11 | 3.84 | 0 | 0 | 26 | 8.00 | 0 | 1 | 0 | 0.00 | 0 | 0 |
| 5 | ಚಿಕ್ಕಬಳ್ಳಾಪುರ | 0 | 0.00 | 0 | 0 | 122 | 18.27 | 0 | 0 | 0 | 0.00 | 0 | 0 |
| 6 | ರಾಮನಗರ | 0 | 0.00 | 0 | 0 | 14 | 0.76 | 0 | 14 | 0 | 0.00 | 0 | 0 |
| 7 | ದಾವಣಗೆರೆ | 1 | 0.00 | 0 | 0 | 39 | 7.30 | 0 | 0 | 1 | 0.50 | 0 | 0 |
| 8 | ಚಿತ್ರದುರ್ಗ | 9 | 8.25 | 0 | 0 | 32 | 10.54 | 1 | 0 | 0 | 0.00 | 0 | 0 |
| 9 | ಶಿವಮೊಗ್ಗ | 8 | 11.96 | 0 | 4 | 175 | 25.09 | 0 | 0 | 0 | 0.00 | 0 | 0 |
| 10 | ಮೈಸೂರು | 0 | 0.00 | 0 | 0 | 249 | 58.16 | 0 | 0 | 0 | 0.00 | 0 | 0 |
| 11 | ಮಂಡ್ಯ | 0 | 0.00 | 0 | 0 | 2 | 1.32 | 0 | 0 | 0 | 0.00 | 0 | 0 |
| 12 | ಚಾಮರಾಜನಗರ | 0 | 0.00 | 0 | 0 | 29 | 1.48 | 0 | 0 | 0 | 0.00 | 0 | 0 |
| 13 | ಹಾಸನ | 0 | 0.00 | 0 | 0 | 41 | 4.12 | 32 | 0 | 1 | 0.00 | 1 | 0 |
| 14 | ದಕ್ಷಿಣ ಕನ್ನಡ | 55 | 13.69 | 0 | 8 | 158 | 61.81 | 0 | 3 | 33 | 21.62 | 0 | 0 |
| 15 | ಉಡುಪಿ | 67 | 19.61 | 0 | 2 | 153 | 34.55 | 0 | 29 | 1 | 0.00 | 0 | 1 |
| 16 | ಕೊಡಗು | 0 | 0.00 | 0 | 0 | 21 | 3.83 | 0 | 0 | 14 | 1.05 | 0 | 0 |
| 17 | ಚಿಕ್ಕಮಗಳೂರು | 46 | 0.00 | 34 | 12 | 53 | 2.42 | 0 | 45 | 24 | 0.00 | 0 | 24 |
| 18 | ಕಲಬುರಗಿ | 3 | 5.90 | 0 | 0 | 188 | 23.19 | 143 | 0 | 46 | 7.75 | 44 | 0 |
| 19 | ರಾಯಚೂರು | 4 | 0.00 | 4 | 0 | 243 | 34.46 | 100 | 49 | 29 | 10.83 | 14 | 0 |
| 20 | ಬೀದರ್ | 0 | 0.00 | 0 | 0 | 62 | 21.11 | 0 | 0 | 0 | 0.00 | 0 | 0 |
| 21 | ಬಳ್ಳಾರಿ | 0 | 0.00 | 0 | 0 | 135 | 11.21 | 63 | 2 | 6 | 9.07 | 0 | 0 |
| | ಹೊಸಪೇಟೆ | 0 | 0.00 | 0 | 0 | 136 | 4.06 | 80 | 15 | 2 | 0.32 | 0 | 0 |
| 22 | ಯಾದಗಿರಿ | 0 | 0.00 | 0 | 0 | 119 | 8.00 | 108 | 0 | 3 | 0.00 | 3 | 0 |
| 23 | ಕೊಪ್ಪಳ | 2 | 6.39 | 0 | 1 | 301 | 52.37 | 56 | 0 | 38 | 54.96 | 2 | 1 |
| 24 | ಬೆಳಗಾಂ | 5 | 0.00 | 0 | 5 | 62 | 6.33 | 41 | 0 | 0 | 0.00 | 0 | 0 |
| 25 | ವಿಜಯಪುರ | 0 | 0.00 | 0 | 0 | 9 | 3.90 | 0 | 0 | 0 | 0.00 | 0 | 0 |
| 26 | ಧಾರವಾಡ | 67 | 3.76 | 1 | 1 | 68 | 24.25 | 0 | 0 | 7 | 1.45 | 0 | 0 |
| 27 | ಗದಗ | 10 | 8.15 | 0 | 0 | 127 | 25.26 | 0 | 0 | 28 | 16.27 | 0 | 1 |
| 28 | ಹಾವೇರಿ | 4 | 0.00 | 0 | 0 | 127 | 25.60 | 59 | 0 | 44 | 9.30 | 27 | 0 |
| 29 | ಬಾಗಲಕೋಟೆ | 0 | 0.00 | 0 | 0 | 45 | 0.00 | 45 | 0 | 0 | 0.00 | 0 | 0 |
| 30 | ಉತ್ತರ ಕನ್ನಡ | 1 | 1.00 | 0 | 0 | 122 | 23.71 | 0 | 41 | 11 | 3.23 | 0 | 9 |
| | ಒಟ್ಟು | 293 | 82.55 | 39 | 33 | 2866 | 506.41 | 728 | 201 | 288 | 136.35 | 91 | 36 |

Deputy Director (Min. Admn)
Dept. of Mines & Geology

## ಜಿಲ್ಲಾ ಮರಳು ಸಮಿತಿಯ ವಿವಿಧ ಇಲಾಖೆಗಳಿಂದ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ತಡೆಗಟ್ಟಿ ದಂಡ ವಿಧಿಸಿರುವ ಮತ್ತು ಮೊಕದ್ದಮೆ ದಾಖಲಿಸಿರುವ ವಿವರಗಳು

2021–22

| ಕ್ರ ಸಂ. | ಜಿಲ್ಲೆ | 1. ಅನಧಿಕೃತ ಮರಳು ಗಣಿಗಾರಿಕೆ | | | | 2. ಅನಧಿಕೃತ ಸಾಧಾರಣ ಮರಳು ಸಾಗಾಣಿಕೆ | | | | 3. ಅನಧಿಕೃತ ಸಾಧಾರಣ ಮರಳು ದಾಸ್ತಾನು | | | |
|---|---|---|---|---|---|---|---|---|---|---|---|---|---|
| | | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡದ ಮೊತ್ತ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | | ವಶಪಡಿಸಿ ಕೊಂಡ / ಪತ್ತೆಹಚ್ಚಿದ ವಾಹನಗಳ ಸಂಖ್ಯೆ | ವಿಧಿಸಿರುವ ದಂಡದ ಮೊತ್ತ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡದ ಮೊತ್ತ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | |
| | | | | FIR No. | PCR / CC No. | | | FIR No. | PCR / CC No. | | | FIR No. | PCR / CC No. |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 1 | ಬೆಂಗಳೂರು ಗ್ರಾಮಾಂತರ | 0 | 0.00 | 0 | 0 | 0 | 0.00 | 0 | 0 | 0 | 0.00 | 0 | 0 |
| 2 | ಬೆಂಗಳೂರು ನಗರ | 0 | 0.00 | 0 | 0 | 0 | 0.00 | 0 | 0 | 0 | 0.00 | 0 | 0 |
| 3 | ತುಮಕೂರು | 0 | 0.00 | 0 | 0 | 14 | 5.26 | 0 | 0 | 1 | 0.00 | 0 | 1 |
| 4 | ಕೋಲಾರ | 2 | 0.60 | 0 | 0 | 14 | 8.55 | 0 | 0 | 0 | 0.00 | 0 | 0 |
| 5 | ಚಿಕ್ಕಬಳ್ಳಾಪುರ | 0 | 0.00 | 0 | 0 | 122 | 13.91 | 80 | 0 | 0 | 0.00 | 0 | 0 |
| 6 | ರಾಮನಗರ | 0 | 0.00 | 0 | 0 | 1 | 1.37 | 0 | 1 | 0 | 0.00 | 0 | 0 |
| 7 | ದಾವಣಗೆರೆ | 0 | 0.00 | 0 | 0 | 311 | 60.95 | 0 | 0 | 0 | 0.00 | 0 | 0 |
| 8 | ಚಿತ್ರದುರ್ಗ | 4 | 6.76 | 1 | 0 | 29 | 4.68 | 16 | 0 | 1 | 0.48 | 0 | 0 |
| 9 | ಶಿವಮೊಗ್ಗ | 4 | 1.80 | 0 | 1 | 140 | 39.74 | 0 | 0 | 2 | 3.23 | 0 | 0 |
| 10 | ಮೈಸೂರು | 1 | 0.00 | 1 | 0 | 98 | 0.00 | 98 | 0 | 9 | 0.00 | 9 | 0 |
| 11 | ಮಂಡ್ಯ | 10 | 1.23 | 4 | 6 | 21 | 2.07 | 15 | 0 | 1 | 1.01 | 0 | 1 |
| 12 | ಚಾಮರಾಜನಗರ | 0 | 0.00 | 0 | 0 | 41 | 3.53 | 0 | 0 | 1 | 0.10 | 0 | 0 |
| 13 | ಹಾಸನ | 0 | 0.00 | 0 | 0 | 56 | 10.54 | 35 | 2 | 6 | 5.32 | 0 | 1 |
| 14 | ದಕ್ಷಿಣ ಕನ್ನಡ | 117 | 41.28 | 0 | 8 | 148 | 43.84 | 0 | 103 | 11 | 23.46 | 0 | 0 |
| 15 | ಉಡುಪಿ | 94 | 24.66 | 0 | 4 | 155 | 39.93 | 0 | 2 | 26 | 2.36 | 0 | 0 |
| 16 | ಕೊಡಗು | 7 | 1.59 | 0 | 2 | 54 | 12.78 | 7 | 1 | 32 | 4.43 | 1 | 0 |
| 17 | ಚಿಕ್ಕಮಗಳೂರು | 13 | 0.00 | 12 | 1 | 47 | 2.38 | 35 | 0 | 22 | 0.00 | 20 | 2 |
| 18 | ಕಲಬುರಗಿ | 4 | 0.70 | 1 | 1 | 288 | 48.36 | 168 | 0 | 29 | 4.54 | 23 | 0 |
| 19 | ರಾಯಚೂರು | 3 | 0.00 | 3 | 0 | 267 | 34.99 | 134 | 0 | 27 | 10.67 | 20 | 0 |
| 20 | ಬೀದರ್ | 0 | 0.00 | 0 | 0 | 78 | 40.13 | 0 | 0 | 1 | 0.09 | 0 | 0 |
| 21 | ಬಳ್ಳಾರಿ | 2 | 6.00 | 0 | 0 | 106 | 18.02 | 0 | 13 | 9 | 10.26 | 0 | 0 |
| 22 | ವಿಜಯನಗರ (ಹೊಸಪೇಟೆ) | 0 | 0.00 | 0 | 0 | 126 | 5.44 | 106 | 2 | 4 | 0.00 | 2 | 0 |
| 23 | ಯಾದಗಿರಿ | 5 | 1.50 | 2 | 0 | 136 | 41.83 | 62 | 0 | 17 | 0.92 | 16 | 0 |
| 24 | ಕೊಪ್ಪಳ | 2 | 0.00 | 1 | 1 | 299 | 74.26 | 29 | 4 | 33 | 27.68 | 23 | 0 |
| 25 | ಬೆಳಗಾಂ | 24 | 1.00 | 0 | 22 | 47 | 8.94 | 17 | 2 | 0 | 0.00 | 0 | 0 |
| 26 | ವಿಜಯಪುರ | 0 | 0.00 | 0 | 0 | 8 | 7.91 | 0 | 0 | 2 | 0.00 | 2 | 0 |
| 27 | ಧಾರವಾಡ | 0 | 0.00 | 0 | 0 | 36 | 11.55 | 0 | 0 | 0 | 0.00 | 0 | 0 |
| 28 | ಗದಗ | 3 | 5.31 | 0 | 0 | 119 | 33.35 | 0 | 0 | 8 | 85.35 | 0 | 1 |
| 29 | ಹಾವೇರಿ | 5 | 0.00 | 5 | 0 | 64 | 13.52 | 5 | 2 | 15 | 1.10 | 10 | 1 |
| 30 | ಬಾಗಲಕೋಟೆ | 17 | 21.00 | 0 | 0 | 72 | 6.45 | 15 | 0 | 3 | 1.58 | 0 | 1 |
| 31 | ಉತ್ತರ ಕನ್ನಡ | 9 | 0.50 | 0 | 8 | 52 | 14.46 | 0 | 17 | 1 | 1.00 | 0 | 0 |
| | ಒಟ್ಟು | 326 | 113.93 | 30 | 54 | 2949 | 608.74 | 822 | 149 | 261 | 183.58 | 126 | 8 |

Deputy Director (Min. Admn)
Dept. of Mines & Geology

ಜಿಲ್ಲಾ ಮರಳು ಸಮಿತಿಯ ವಿವಿಧ ಇಲಾಖೆಗಳಿಂದ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ತಡೆಗಟ್ಟಿ ದಂಡ ವಿಧಿಸಿರುವ ಮತ್ತು ಮೊಕದ್ದಮೆ ದಾಖಲಿಸಿರುವ ವಿವರಗಳು

2022-23

| ಕ್ರ. ಸಂ. | ಜಿಲ್ಲೆ | 1. ಅನಧಿಕೃತ ಮರಳು ಗಣಿಗಾರಿಕೆ | | | | 2. ಅನಧಿಕೃತ ಸಾಧಾರಣ ಮರಳು ಸಾಗಾಣಿಕೆ | | | | 3. ಅನಧಿಕೃತ ಸಾಧಾರಣ ಮರಳು ದಾಸ್ತಾನು | | | |
|---|---|---|---|---|---|---|---|---|---|---|---|---|---|
| | | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿರುವ ದಂಡ (ರೂ.ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗ ಸಂಖ್ಯೆ | |
| | | | | FIR No. | CC No. | | | FIR No. | CC No. | | | FIR No. | CC No |
| 1 | 2 | 3 | 5 | 6 | 7 | 8 | 10 | 11 | 12 | 13 | 15 | 16 | 17 |
| 1 | ಬೆಂಗಳೂರು ಗ್ರಾಮಾಂತರ | 0 | 0.00 | 0 | 0 | 0 | 0.00 | 0 | 0 | 0 | 0.00 | 0 | 0 |
| 2 | ಬೆಂಗಳೂರು ನಗರ | 0 | 0.00 | 0 | 0 | 0 | 0.00 | 0 | 0 | 0 | 0.00 | 0 | 0 |
| 3 | ತುಮಕೂರು | 0 | 0.00 | 0 | 0 | 27 | 9.01 | 0 | 0 | 3 | 0.00 | 0 | 3 |
| 4 | ಕೋಲಾರ | 1 | 0.30 | 0 | 0 | 15 | 7.10 | 0 | 0 | 0 | 0.00 | 0 | 0 |
| 5 | ಚಿಕ್ಕಬಳ್ಳಾಪುರ | 0 | 0.00 | 0 | 0 | 76 | 15.44 | 0 | 0 | 0 | 0.00 | 0 | 0 |
| 6 | ರಾಮನಗರ | 0 | 0.00 | 0 | 0 | 23 | 7.54 | 0 | 0 | 0 | 0.00 | 0 | 0 |
| 7 | ದಾವಣಗೆರೆ | 0 | 0.00 | 0 | 0 | 121 | 27.50 | 0 | 0 | 2 | 0.50 | 0 | 0 |
| 8 | ಚಿತ್ರದುರ್ಗ | 4 | 2.00 | 2 | 0 | 50 | 14.24 | 20 | 0 | 2 | 1.79 | 0 | 0 |
| 9 | ಶಿವಮೊಗ್ಗ | 4 | 3.22 | 1 | 1 | 131 | 34.97 | 0 | 0 | 1 | 2.22 | 1 | 0 |
| 10 | ಮೈಸೂರು | 1 | 2.02 | 0 | 0 | 33 | 0.96 | 33 | 10 | 9 | 1.13 | 9 | 6 |
| 11 | ಮಂಡ್ಯ | 27 | 0.00 | 7 | 20 | 29 | 4.08 | 6 | 1 | 2 | 0.00 | 2 | 0 |
| 12 | ಚಾಮರಾಜನಗರ | 0 | 0.00 | 0 | 0 | 17 | 2.86 | 5 | 1 | 0 | 0.00 | 0 | 0 |
| 13 | ಹಾಸನ | 3 | 1.85 | 0 | 0 | 107 | 22.99 | 28 | 12 | 6 | 0.61 | 3.00 | 1 |
| 14 | ದಕ್ಷಿಣ ಕನ್ನಡ | 37 | 20.61 | 0 | 6 | 172 | 76.12 | 0 | 2 | 60 | 48.90 | 0 | 0 |
| 15 | ಉಡುಪಿ | 117 | 24.27 | 0 | 1 | 218 | 53.64 | 0 | 0 | 6 | 0.90 | 0 | 0 |
| 16 | ಕೊಡಗು | 2 | 3.05 | 0 | 0 | 43 | 9.93 | 7 | 2 | 27 | 5.71 | 0 | 0 |
| 17 | ಚಿಕ್ಕಮಗಳೂರು | 1 | 0.50 | 0 | 0 | 48 | 7.10 | 5 | 8 | 12 | 0.00 | 5 | 7 |
| 18 | ಕಲಬುರಗಿ | 2 | 0.53 | 1 | 0 | 194 | 35.76 | 87 | 0 | 26 | 2.91 | 22 | 0 |
| 19 | ರಾಯಚೂರು | 1 | 0.00 | 1 | 0 | 330 | 25.30 | 160 | 0 | 38 | 0.00 | 38 | 0 |
| 20 | ಬೀದರ್ | 1 | 0.50 | 0 | 0 | 101 | 51.88 | 0 | 0 | 0 | 0.00 | 0 | 0 |
| 21 | ಬಳ್ಳಾರಿ | 0 | 0.00 | 0 | 0 | 32 | 4.71 | 0 | 0 | 6 | 2.26 | 0 | 0 |
| 22 | ಹೊಸಪೇಟೆ | 3 | 3.00 | 0 | 1 | 139 | 7.02 | 92 | 0 | 2 | 1.23 | 0 | 1 |
| 23 | ಯಾದಗಿರಿ | 6 | 4.00 | 3 | 0 | 90 | 19.06 | 51 | 0 | 11 | 0.20 | 10 | 0 |
| 24 | ಕೊಪ್ಪಳ | 12 | 18.68 | 4 | 3 | 431 | 54.74 | 179 | 0 | 62 | 2.38 | 50 | 0 |
| 25 | ಬೆಳಗಾವಿ | 0 | 0.00 | 0 | 0 | 5 | 1.73 | 0 | 0 | 0 | 0.00 | 0 | 0 |
| 26 | ವಿಜಯಪುರ | 0 | 0.00 | 0 | 0 | 24 | 8.66 | 17 | 0 | 2 | 0.00 | 1 | 1 |
| 27 | ಧಾರವಾಡ | 0 | 0.00 | 0 | 0 | 38 | 12.10 | 0 | 0 | 3 | 1.38 | 0 | 0 |
| 28 | ಗದಗ | 0 | 0.00 | 0 | 0 | 112 | 27.94 | 14 | 0 | 8 | 6.00 | 0 | 0 |
| 29 | ಹಾವೇರಿ | 1 | 0.00 | 1 | 0 | 74 | 25.16 | 0 | 0 | 15 | 4.00 | 0 | 0 |
| 30 | ಬಾಗಲಕೋಟೆ | 14 | 7.49 | 4 | 6 | 97 | 20.22 | 0 | 0 | 0 | 0.00 | 0 | 0 |
| 31 | ಉತ್ತರ ಕನ್ನಡ | 2 | 0.41 | 0 | 1 | 87 | 36.10 | 0 | 1 | 0 | 0.00 | 0 | 0 |
| ಒಟ್ಟು | | 239 | 92.43 | 24 | 39 | 2864 | 623.86 | 704 | 37 | 303 | 82.12 | 141 | 19 |

CI-MMN-155-2023

Deputy Director (Min. Admn
Dept. of Mines & Geology

ಅನುಬಂಧ - 2



**PR-45**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಬಗ್ಗೆ ಮಾರ್ಗಸೂಚಿಗಳು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 344 ಎಂಎಂಎನ್ 2019, ದಿನಾಂಕ 05.05.2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 344 ಎಂಎಂಎನ್ 2019 (ಭಾಗ-7), ದಿನಾಂಕ 01.12.2021.
3. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಏಕ ಕಡತ ಪ್ರಸ್ತಾವನೆ ಸಂಖ್ಯೆ DMG-24012/2021.

********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆಯ (1)ರ ಸರ್ಕಾರದ ಅಧಿಸೂಚನೆಯಲ್ಲಿ, ಕರ್ನಾಟಕ ಮರಳು ನೀತಿ, 2020ನ್ನು ಹಾಗೂ ಅದರ ಅನುಷ್ಠಾನಕ್ಕಾಗಿ ವಿವರವಾದ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಅಧಿಸೂಚನೆಯಲ್ಲಿ, ಹೊಸ ಮರಳು ನೀತಿ, 2020 ಅನ್ವಯ ರಾಜ್ಯದ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡಲು ಅವಕಾಶ ಕಲ್ಪಿಸಿದ್ದು, ಈ ಕುರಿತು ನಿಯಮಗಳನ್ನು ರೂಪಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಏಕ ಕಡತದ ಪ್ರಸ್ತಾವನೆಯಲ್ಲಿ, ರಾಜ್ಯದ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ತಿದ್ದುಪಡಿ ನಿಯಮಗಳಂತೆ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಬಗ್ಗೆ ಕರಡು ಮಾರ್ಗಸೂಚಿಗಳನ್ನು ತಯಾರಿಸಿ, ಸಲ್ಲಿಸಲಾಗಿರುತ್ತದೆ.

ರಾಜ್ಯದ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z ರಂತೆ ಮಾರ್ಗಸೂಚಿಗಳನ್ನು ಹೊರಡಿಸುವುದು ಸೂಕ್ತವೆಂದು ಭಾವಿಸಿ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಐ 344 ಎಂಎಂಎನ್ 2019 (ಭಾಗ-16),**
**ಬೆಂಗಳೂರು, ದಿನಾಂಕ 15.02.2022.**

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಪಟ್ಟಾ ಜಮೀನುಗಳಲ್ಲಿ ದೊರೆಯುವ ಮರಳನ್ನು ತೆಗೆಯಲು ಪಟ್ಟಾದಾರರು ಅರ್ಜಿ ಸಲ್ಲಿಸಿದಲ್ಲಿ, ಜಿಲ್ಲಾ ಮರಳು ಸಮಿತಿಯು ಸಮರ್ಥನೀಯ ಕಾರಣಗಳೊಂದಿಗೆ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z ರಂತೆ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಕುರಿತು ಪ್ರಸ್ತಾವನೆ ಸಲ್ಲಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹೊರಡಿಸಿದೆ.

**ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸುವ ಕುರಿತುಮಾರ್ಗಸೂಚಿಗಳು:**

1. ಈ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ದಾಖಲೆಗಳೊಂದಿಗೆ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸಲು ಪರವಾನಗಿ ಕೋರಿ ಸ್ವೀಕೃತವಾದ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ಪಡೆಯತಕ್ಕದ್ದು.
2. ಈ ಮಾರ್ಗಸೂಚಿಯು ಕರಾವಳಿ ನಿಯಂತ್ರಣ ವಲಯದ (CRZ) ಮಿತಿಯೊಳಗಿನ ಪಟ್ಟಾ ಜಮೀನುಗಳಿಗೆ ಅನ್ವಯಿಸುವುದಿಲ್ಲ.
3. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗಾಗಿ ಅನುಮತಿಸಲು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994 ರ ಷೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವಂತೆ ಕನಿಷ್ಠ ವಿಸ್ತೀರ್ಣ ಇರತಕ್ಕದ್ದು.
4. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಮುನ್ನ ನದಿ ದಂಡೆಯಿಂದ 50 ಮೀಟರ್ ಅಥವಾ ನದಿ ಪಾತ್ರದ ಅಗಲದ ಶೇ.10 ರಷ್ಟು ಅಥವಾ ಇವುಗಳಲ್ಲಿ ಯಾವುದರ ಅಂತರ ಹೆಚ್ಚಿ ೯ ಆ ಅಂತರವನ್ನು ಸುರಕ್ಷಿತ ಅಂತರವಾಗಿ ಕಾಯ್ದುಕೊಳ್ಳತಕ್ಕದ್ದು.
5. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಹೊರಡಿಸಿರುವ Enforce and Monitoring Guidelines of Sand Mining, 2020 ರಂತೆ ನದಿ ಪಾತ್ರದಲ್ಲಿ ಮರಳು ಗಣಿಗಾರಿಕೆಗೆ ಸಾಧ್ಯತೆ ಇರುವ 5 ಕಿ.ಮೀ ಪರಿಮಿತಿ ವ್ಯಾಪ್ತಿಯ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವಂತಿಲ್ಲ. ಒಂದು ವೇಳೆ ಸದರಿ ಪಟ್ಟಾ ಜಮೀನಿನಲ್ಲಿ ಹೂಳು / ಮರಳು ಮರುಪೂರ್ಣವಾಗುವ ಸಾಧ್ಯತೆ ಇದ್ದಂತಹ ಸಂದರ್ಭದಲ್ಲಿ ನದಿ ಪಾತ್ರದಿಂದ 5 ಕಿ. ಮೀ ವ್ಯಾಪ್ತಿಯೊಳಗೆ ಬರುವ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆ ಅನುಮತಿ ನೀಡಬಹುದಾಗಿದ್ದು, ಈ ಸಂಬಂಧ ಪೂರ್ವ ಕಾರ್ಯಸಾಧ್ಯತೆ ವರದಿ (Pre Feasibility Report) ಯನ್ನು Recognized Qualified Persons (RQP) ಗಳಿಂದ ಪಡೆದು, ಜಿಲ್ಲಾ ಮರಳು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರವೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

6. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅಪೇಕ್ಷಿಸಿದ ಪ್ರದೇಶವು ಸಾರ್ವಜನಿಕ ರಚನೆಗಳಿಂದ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 6(2) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಅಂತರವಿರತಕ್ಕದ್ದು.

7. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(5) ರಡಿ ಸಂಬಂಧಪಟ್ಟ ತಹಶೀಲ್ದಾರ್, ಕಂದಾಯ ಇಲಾಖೆ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ ಇವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ನಮೂನೆ-ಎಸ್ ರಲ್ಲಿ ತಾಂತ್ರಿಕ ವರದಿ ಪಡೆಯುವುದು.

8. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ತಾಂತ್ರಿಕ ಅಧಿಕಾರಿಗಳು ಅರ್ಜಿತ ಪಟ್ಟಾ ಜಮೀನುಗಳಲ್ಲಿನ ಮರಳಿನ ಮಾದರಿಗಳನ್ನು ಸಂಗ್ರಹಿಸಿ, ನಿರ್ಮಾಣ ಕಾಮಗಾರಿಗಳಿಗೆ ಬಳಸಲು ಯೋಗ್ಯವಿರುವ ಕುರಿತು ವಿಶ್ಲೇಷಣೆಗಾಗಿ ಲೋಕೋಪಯೋಗಿ ಇಲಾಖೆಯ ಗುಣನಿಯಂತ್ರಣ ಪ್ರಯೋಗ ಶಾಲೆ / NABL ಮಾನ್ಯತೆ ಪಡೆದಿರುವ ಪ್ರಯೋಗಶಾಲೆಗಳಿಂದ ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಸಿವಿಲ್ ಇಂಜಿನಿಯರಿಂಗ್ ವಿಭಾಗಗಳ ಪ್ರಯೋಗ ಶಾಲೆಗಳಲ್ಲಿ ಪರೀಕ್ಷಿಸಿ ವಿಶ್ಲೇಷಣಾ ವರದಿ ಪಡೆಯುವುದು. ಈ ಸಂಬಂಧ ತಗಲುವ ವೆಚ್ಚವನ್ನು ಪಟ್ಟಾದಾರರೇ ಭರಿಸತಕ್ಕದ್ದು.

9. ಅರ್ಜಿ ಸಲ್ಲಿಸಿದ ಪಟ್ಟಾ ಪ್ರದೇಶದ ಅಂತರ್ಜಲ ಸ್ಥಿತಿಗತಿ ಮತ್ತು ಮರಳು ಗಣಿಗಾರಿಕೆಯ ಪೂರ್ವ ಕಾರ್ಯಸಾಧ್ಯತೆ (Pre-Feasibility) ಬಗ್ಗೆ ಸ್ಪಷ್ಟ ಅಭಿಪ್ರಾಯ ವರದಿಯನ್ನು ಜಿಲ್ಲಾ ಅಂತರ್ಜಲ ನಿರ್ದೇಶನಾಲಯದ ಹಿರಿಯ ಭೂವಿಜ್ಞಾನಿಗಳಿಂದ ಪಟ್ಟಾದಾರರೇ ಪಡೆದು ಸಂಬಂಧಪಟ್ಟ ಉಪನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರಿಗೆ ಸಲ್ಲಿಸುವುದು.

10. ಮರಳು ಗಣಿಗಾರಿಕೆಗೆ ಅನುಮತಿ ಕೋರಿರುವ ಪಟ್ಟಾ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಜಿಲ್ಲಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳು ಕಂದಾಯ ಇಲಾಖೆಯ ಸಹಯೋಗದೊಂದಿಗೆ ಜಂಟಿ ಸರ್ವೆ ಕಾರ್ಯ ನಿರ್ವಹಿಸಿ, ಗಡಿ ಗುರುತು ಕಲ್ಲುಗಳನ್ನು ಸ್ಥಾಪಿಸಿ, ಜಂಟಿ ಮೋಜಣಿ ವರದಿ ಪಡೆಯುವುದು.

11. ಜಿಲ್ಲಾ ಮರಳು ಸಮಿತಿಯು ಸಮರ್ಥನೀಯ ಕಾರಣಗಳೊಂದಿಗೆ ಅಪೇಕ್ಷಿತ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ಸಂಬಂಧ ಪ್ರಸ್ತಾವನೆಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶನಾಲಯದ ಮುಖಾಂತರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

12. ಸರ್ಕಾರವು, ಗಣಿ ಮತ್ತು ಭೂವಿಜ್ಞಾನ ನಿರ್ದೇಶನಾಲಯದ ಮೂಲಕ ಜಿಲ್ಲಾ ಮರಳು ಸಮಿತಿಯಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅಗತ್ಯ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ, ಪ್ರಸ್ತಾವನೆಯನ್ನು ಅನುಮೋದಿಸಬಹುದಾಗಿರುತ್ತದೆ.

13. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸಲು ಸರ್ಕಾರದಿಂದ ಅನುಮೋದನೆ ದೊರೆತ ನಂತರ ಜಿಲ್ಲಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳು ಅಗತ್ಯ ಶಾಸನಬದ್ಧ ದಾಖಲೆಗಳಾದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್, ಪರಿಸರ ಅನುಮತಿ ಪತ್ರ, ಭೂಪರಿವರ್ತನೆ ಆದೇಶ ಹಾಗೂ ಅವಶ್ಯವೆಂದು ಕಂಡುಬರುವ ಇತರೆ ದಾಖಲೆಗಳನ್ನು ಪಟ್ಟಾದಾರರು ಸಲ್ಲಿಸತಕ್ಕದ್ದು. ಅಂತೆಯೇ, ಪಟ್ಟಾ ಪ್ರದೇಶವನ್ನು Total Station / Drone / LIDAR ಉಪಕರಣದಿಂದ

ಸರ್ವೆ ನಡೆಸಿ, Reduced Level ನ್ನು ದಾಖಲಿಸಿದ ವರದಿಯನ್ನು ಪಡೆಯುವುದು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಪಟ್ಟಾದಾರರೇ ಭರಿಸಿದ ನಂತರ ನಿಯಮಾನುಸಾರ ಗುತ್ತಿಗೆ ಅಮಲ್ಜಾರಿ (Licence Deed) ಜಾರಿಗೊಳಿಸತಕ್ಕದ್ದು.

14. ಮರಳು ಗಣಿಗಾರಿಕೆ ಪರವಾನಗಿ ಅಮಲ್ಜಾರಿ ಸಮಯದಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ನಿಯಮ 36(5)ರಂತೆ Performance guarantee ಪಡೆಯತಕ್ಕದ್ದು.

15. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ಪಡೆದ ಪರವಾನಗಿದಾರರು ನಿಯಮಗಳನ್ವಯ ರಾಜಧನ, ಕರ್ನಾಟಕ ಉಪಖನಿಜ ನಿಯಮಗಳು, 1994 ರ ನಿಯಮ 36(ಎ) ರಂತೆ ರಾಜಧನದ ಶೇ.10 ರಷ್ಟು ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ (DMF) ಗೆ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z(7) ರನ್ವಯ ಹೆಚ್ಚುವರಿ ನಿಯತಕಾಲಿಕ ಸಂದಾಯದ ಮೊತ್ತ (Additional Periodic Payment) ಪಾವತಿಸತಕ್ಕದ್ದು.

16. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ನೀಡುವ ಅನುಮತಿಯು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 7 ರಂತೆ ಸಕ್ಷಮ ಪ್ರಾಧಿಕಾರವು ಕಾಲಕಾಲಕ್ಕೆ ವಿಧಿಸುವ ಹೆಚ್ಚುವರಿ ಷರತ್ತು ಹಾಗೂ ನಿಬಂಧನೆಗಳಿಗೆ ಮತ್ತು ಈ ಪ್ರದೇಶದಲ್ಲಿ ಗಣಿಗಾರಿಕೆ ನೀಡುವ ಪರಿಸರ ಅನುಮತಿ ಪತ್ರದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

**<u>ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸಲು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:</u>**

ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆ ನಡೆಸಲು ಅರ್ಜಿದಾರರು ನಿಗದಿತ ನಮೂನೆ AQL ನಲ್ಲಿ ಅರ್ಜಿ ಶುಲ್ಕ ರೂ. 2000/- (ಪ್ರತಿ ಅರ್ಜಿಗೆ) ಪಾವತಿಸಿ ಈ ಕೆಳಕಂಡ ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಕಛೇರಿಗೆ ಅರ್ಜಿ ಸಲ್ಲಿಸುವುದು.

1. ಅರ್ಜಿದಾರರ ವಾಸಸ್ಥಳದ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್ / ಚುನಾವಣಾ ಗುರುತಿನ ಪತ್ರ ಹಾಗೂ ಇತರೆ ದಾಖಲೆಗಳ ಪ್ರತಿ.
2. ಅರ್ಜಿದಾರರ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 4 ಭಾವಚಿತ್ರಗಳು.
3. ಅರ್ಜಿದಾರರು ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಪಾನ್ ಕಾರ್ಡ್ ಮತ್ತು ಹಿಂದಿನ ಆರ್ಥಿಕ ಸಾಲಿನ ಆದಾಯ ತೆರಿಗೆ ಪಾವತಿಸಿದ ದಾಖಲೆ ಅಥವಾ ಜಿ.ಎಸ್.ಟಿ. ಪಾವತಿದಾರರಾಗಿದ್ದಲ್ಲಿ ನೋಂದಣಿ (Registration Certificate) ಪತ್ರ ಸಲ್ಲಿಸುವುದು.
4. ಅರ್ಜಿದಾರರು ಕಂಪನಿ / ಉದ್ದಿಮೆ / ಸಂಸ್ಥೆ ಆಗಿದ್ದಲ್ಲಿ Indian Companies Act, 1956 ರಡಿ ಅಥವಾ ಇತರೆ ಯಾವುದೇ ಕಾಯ್ದೆಯಡಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ನೋಂದಣಿ ಪತ್ರ ಸಲ್ಲಿಸುವುದು.
5. ಆರ್. ಟಿ. ಸಿ.
6. ಆಕಾರ ಬಂದ್ (ಫಾರಂ-10)
7. ಮ್ಯೂಟೇಶನ್ ಪ್ರತಿ
8. ಆರ್.ಟಿ.ಸಿ. ಯ ಕಾಲಂ 11 ರಲ್ಲಿ ಯಾವುದಾದರೂ ಋಣಭಾರಗಳು ಇದ್ದಲ್ಲಿ, ಸಂಬಂಧಪಟ್ಟ ಸಹಕಾರಿ ಸಂಘ / ಬ್ಯಾಂಕ್ ಗಳಿಂದ ಪಡೆದ ಬೇ ಬಾಕಿ ಪ್ರಮಾಣ ಪತ್ರ ಅಥವಾ ಭೋಜಾ ತೆಗೆದು ಹಾಕಿದ RTC ಪ್ರತಿಗಳನ್ನು ಸಲ್ಲಿಸುವುದು.

9. ಅರ್ಜಿದಾರರು, ಈಗಾಗಲೇ ಖನಿಜ / ಉಪ ಖನಿಜ ಗಣಿ ಗುತ್ತಿಗೆ ಹೊಂದಿದ್ದಲ್ಲಿ, ಸರ್ಕಾರಕ್ಕೆ ಪಾವತಿಸಬೇಕಾದ ಬಾಕಿಯ ಕುರಿತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಬೇಬಾಕಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
10. ಒಪ್ಪಿಗೆ ಪ್ರಮಾಣದ ಪತ್ರದ ಅಡಿಯಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದಲ್ಲಿ, ಕೆ.ಎಂ.ಎಂ.ಸಿ.ಆರ್, 1994 ರ ನಿಯಮ 32 (8) ರಂತೆ ನಮೂನೆ-CFQ ನಲ್ಲಿ ನೋಟರಿಯೊಂದಿಗೆ ಪಟ್ಟಾದಾರರಿಂದ ಪಡೆದಿರುವ ಒಪ್ಪಿಗೆ ಪತ್ರವನ್ನು ಸಲ್ಲಿಸುವುದು.
11. GPA ಪತ್ರದ ಆಧಾರದ ಮೇರೆಗೆ ಮರಳು ಗಣಿಗಾರಿಕೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದಲ್ಲಿ ಪಟ್ಟಾದಾರರಿಂದ ಪಡೆದಿರುವ ನೋಂದಾಯಿತ GPA ಪತ್ರವನ್ನು ಸಲ್ಲಿಸುವುದು.
12. ಹಿಸ್ಸಾ / ಪೋಡಿ ನಕ್ಷೆ.
13. ಗ್ರಾಮ ನಕ್ಷೆಯಲ್ಲಿ ಅರ್ಜಿತ ಪ್ರದೇಶವನ್ನು ಗುರುತಿಸಿ ಸಲ್ಲಿಸುವುದು.
14. ಮರಳು ಗಣಿಗುತ್ತಿಗೆ ಕೋರಿರುವ ಅರ್ಜಿತ ಪ್ರದೇಶ (ಪಟ್ಟಾ ಜಮೀನಿನ) ನೀಲಿ ನಕಾಶೆ 1"=660 ಸ್ಕೇಲ್ ನಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳೊಂದಿಗೆ ನಮೂದಿಸಿ ಸಲ್ಲಿಸುವುದು.
15. ಅರ್ಜಿತ ಪ್ರದೇಶದ ಗಡಿ ಬಾಂದುಗಳನ್ನು DGPS ಉಪಕರಣದ ಮೂಲಕ ಸರ್ವೇ ನಡೆಸಿ ಗುರುತಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಿವಪ್ರಕಾಶ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).